# ನುಣ್ಣನೆ ರಸ್ತೆ ಒಡೆಯುನ ನುಣ್ಣಗಿನ ಸಿನಿಮಾ

ಅದು ಸಿನಿಮಾ 'ನೋಡಲು ಬನ್ನಿ' ಎಂದು ಕರೆಯಲು ಮಾಡಿಸಿದ್ದ ಆಮಂತ್ರಣ ಪತ್ರ. ಅದನ್ನು ತೆರೆದೊಡನೆ ವಿಡಿಯೋ ತುಣುಕೊಂದು ಥಟ್ಟನೆ ಜೀವತಳೆದು, ಅದರಲ್ಲಿ ಖ್ಯಾತ ಉದ್ಯಮಿಯೂ ಚಿತ್ರ ನಿರ್ಮಾಪಕರೂ ತಮ್ಮ ಮೃದುಭಾಷೆಯಲ್ಲಿ ಸಿನಿಮಾ ಬಗ್ಗೆ ಹೇಳಿಕೊಳ್ಳುವುದು ವಿಶೇಷ.. ಅಂಥದೊಂದು ದುಬಾರಿ ಆಮಂತ್ರಣ ಪತ್ರ ಪಡೆದ ಅನೇಕರಿಗೆ ಧನ್ಯತಾ ಭಾವ. 'ಒಂದು ಇನ್ವಿಟೇಷನ್‌ಗೆ ಮೂರು ಸಾವಿರ ರೂಪಾಯಿಯಂತೆ ಕಣ್ರೀ' ಎಂದು ಎಲ್ಲರೂ ಬೆರಗಿನಿಂದ ಮಾತಾಡಿಕೊಂಡರು. ಉದ್ಯಮಿಗೆ ಖುಷಿ.

ಅವರು ನಿರ್ಮಿಸಿದ್ದು ಪಕ್ಕಾ ಕಮರ್ಷಿಯಲ್ ಚಿತ್ರ ಅಲ್ಲ; ನಾಯಕ ಮಾತ್ರ ಕಮರ್ಷಿಯಲ್. ಚೌಕಾಸಿಯ ನಂತರ ಸುಮಾರು ಒಂದು ಕೋಟಿ ರೂಪಾಯಿ ಪಡೆದು ಕಾಲ್‌ಷೀಟ್ ಕೊಟ್ಟಿದ್ದ ಆ ನಾಯಕನ ಮೂಲ ಕರ್ನಾಟಕ. ನಟನಾಗಿ ಬೇರುಬಿಟ್ಟಿರುವುದು ತಮಿಳು ನೆಲದಲ್ಲಿ. ಜನಪ್ರಿಯತೆಯ ಗತವೈಭವವನ್ನು ಉಜ್ಜುವವರ ಸಾಲಿಗೆ ಸೇರುವ ಈ ನಟ ಅಪರೂಪಕ್ಕೊಮ್ಮೆ ಕನ್ನಡದ ಚಿತ್ರಗಳಲ್ಲೂ ನಟಿಸುವುದಿದೆ. ನಿರ್ದೇಶಕ ಕೂಡ ತಮಿಳು ಮೂಲದವರೇ.

'ಮಧುರ ಮೂರ್ತಿ' ಎಂದೇ ಆಪ್ತರೊಬ್ಬರಿಂದ ಬಿರುದು ಪಡೆದ ಸಂಗೀತ ನಿರ್ದೇಶಕರು ಚಿತ್ರಕ್ಕೆ ಗೀತ ಸಂಯೋಜನೆ ಮಾಡಿಕೊಟ್ಟರು. ಯಾಕೋ ಅದು ರುಚಿಸಲಿಲ್ಲ. ಅದಕ್ಕೇ ತಮಿಳಿನ ಸಂಗೀತ ರಾಜ ಎನಿಸಿಕೊಂಡ ಇನ್ನೊಬ್ಬ ಹಿರಿಯರನ್ನು ಕರೆಸಿ, ದೊಡ್ಡ ಮೊತ್ತದ ಸಂಭಾವನೆ ನೀಡಿ ನಿರ್ಮಾಪಕರು ಹೊಸದಾಗಿ ಸಂಗೀತ ಮಾಡಿಸಿದರು.

ಈ ನಿರ್ಮಾಪಕ ಮೂಲತಃ ಶೋಮ್ಯಾನ್. ಈ ಚಿತ್ರದಲ್ಲಿ ನಾಯಕಿಯ ಆಯ್ಕೆ ಅವರದ್ದೇ. ಆ ನಾಯಕಿಗೂ ಅವರಿಗೂ ಸೆಲೆಬ್ರಿಟಿ ಲೋಕದ ನಂಟು. ಸೆಲೆಬ್ರಿಟಿಗಳಲ್ಲದ ಕೆಲವರನ್ನು ಸೇರಿಸಿ ತಂಡ ಕಟ್ಟಿ, ಸೆಲೆಬ್ರಿಟಿ ಕ್ರಿಕೆಟ್ ಆಡಿಸಿ ಆ ಉದ್ಯಮಿ ಕ್ರೀಡಾಂಗಣದಲ್ಲಿ ಖುಷಿ ಪಟ್ಟಾಗ ಆ ನಟಿಯೂ ಅಲ್ಲಿದ್ದರು. ಸಾಮಾಜಿಕ ಕಳಕಳಿಯ ತಮ್ಮ ಸಿನಿಮಾ ಪ್ರಚಾರದ ಪ್ರತಿ ಗೋಷ್ಠಿಯಲ್ಲೂ ಯಾರು ಬರದಿದ್ದರೂ ಆ ನಟಿ ಮಾತ್ರ ತಪ್ಪದೇ ಹಾಜರ್.

ತಮ್ಮ ಚಿತ್ರವನ್ನು ಜರ್ಮನ್ ಚಿತ್ರೋತ್ಸವಕ್ಕೆ ಕೊಂಡೊಯ್ಯುವಷ್ಟು ಅತ್ಯಾತ್ಮವಿಶ್ವಾಸವನ್ನೂ ನಿರ್ಮಾಪಕರು ತೋರಿದರು. 'ಕೊಂಡುಕೊಳ್ಳಿ' ಎಂದು ಅಲ್ಲಿ ನಾಜೂಕಾಗಿ ಕೆಲವರನ್ನು ಕೇಳಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ. ಆಮೇಲೆ ಬೆಂಗಳೂರಿಗೆ ರಜನೀಕಾಂತ್ ಬಂದಾಗ, ಅವರಿಂದ ಹೂಗುಚ್ಛ ಪಡೆದು ತಮ್ಮ ಚಿತ್ರಕ್ಕೆ ಇನ್ನೂ ಒಂದು ಸುತ್ತಿನ ಪ್ರಚಾರ ಕೊಟ್ಟುಕೊಂಡರು. ಕಿವಿ ಕೇಳದ, ಮಾತು ಬಾರದ ಮಗುವೊಂದರ ಕಥೆಯನ್ನು ಅವರು ಕಮರ್ಷಿಯಲ್ ನಾಯಕನ ಪ್ರಭಾವಳಿ ಬಳಸಿಕೊಂಡು ಹೆಚ್ಚು ಜನರಿಗೆ ತಲುಪಿಸುವ ಮಹತ್ವಾಕಾಂಕ್ಷೆ ಹೊಂದಿದ್ದರು. ಸೆಲೆಬ್ರಿಟಿ ಕ್ರಿಕೆಟ್ ನೋಡಲು ಬಂದ ಎಲ್ಲಾ ಪ್ರೇಕ್ಷಕರಿಗೂ ಪುಕ್ಕಟೆಯಾಗಿ ಆಡಿಯೋ ಸೀಡಿ ವಿತರಣೆಯಾಗಿತ್ತು. ಸಿನಿಮಾ ಸಿದ್ಧವಾಗಿ ತಿಂಗಳುಗಳು ಕಳೆದ ನಂತರ ಕೊನೆಗೂ ಬಿಡುಗಡೆಯ ಭಾಗ್ಯ ಸಿಕ್ಕಿತು. ಚಿತ್ರಮಂದಿರದಲ್ಲಿದ್ದ ಪ್ರೇಕ್ಷಕರು ಮಾತ್ರ ಬೆರಳೆಣಿಕೆಯಷ್ಟು!

ಅಂದಹಾಗೆ, ಇದು ಕನ್ನಡದ ಅತಿ ದುಬಾರಿ ಕಲಾತ್ಮಕ ಚಿತ್ರದ ಕಮರ್ಷಿಯಲ್ ಕಥೆ!

**-ಎನ್ವಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68